5A

ನಂ. 1 ಕನ್ನಡ ದಿನಪತ್ರಿಕೆ

ವಿಜಯವಾಣಿ

● VIJAYAVANI » KALABURAGI

ಶುಕ್ರವಾರ 24 ಜನವರಿ 2020

24 JANUARY 2020

# ಕಲಬುರಗಿ ಲೋಕಲ್ ಎಕ್ಸ್‌ಪ್ರೆಸ್

## ಸುದ್ದಿ ಕಾರ್ನರ್

### ಗ್ರಾಹಕರ ಸಂಪರ್ಕ ಸಭೆ ಇಂದು

**ಕಲಬುರಗಿ:** ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ (ಕೆ.ಇ.ಆರ್.ಸಿ.) ನಿರ್ದೇಶನ ಮೇರೆಗೆ, ಗ್ರಾಹಕರೊಡನೆ ಉತ್ತಮ ಬಾಂಧವ್ಯ ಬೆಸೆಯುವ ನಿಟ್ಟಿನಲ್ಲಿ ನಗರದ 1, 2, 3, ಹಾಗೂ 4 ಉಪವಿಭಾಗಗಳ ವ್ಯಾಪ್ತಿಯಲ್ಲಿ ಬರುವ ಗ್ರಾಹಕರ ಸಂಪರ್ಕ ಸಭೆ ಶುಕ್ರವಾರ ಬೆಳಗ್ಗೆ 11ರಿಂದ ಮಧ್ಯಾಹ್ನ 2ರವರೆಗೆ ಸ್ಟೇಷನ್ ರಸ್ತೆಯ ನಿಗಮದ ಕಚೇರಿ ಸಭಾಂಗಣದಲ್ಲಿ ಜರುಗಲಿದೆ ಎಂದು ಜೆಸ್ಕಾಂ ತಿಳಿಸಿದೆ. ಕಲಬುರಗಿ ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕಿ ರಾಗಪ್ರಿಯಾ ಅಧ್ಯಕ್ಷತೆ ವಹಿಸಲಿದ್ದು, ಗ್ರಾಹಕರು ಸಭೆಯಲ್ಲಿ ಭಾಗವಹಿಸಿ ವಿದ್ಯುಚ್ಛಕ್ತಿಗೆ ಸಂಬಂಧಿಸಿದ ಕೊಂದು ಕೊರತೆಗಳನ್ನು ಸಲ್ಲಿಸಿ, ಪರಿಹಾರ ಕಂಡುಕೊಳ್ಳಬಹುದು ಎಂದು ತಿಳಿಸಿದೆ.